ಹೆಚ್ಚು ನೆಲದ ಮೇಲೆ ಕೂರುತ್ತಾರೆ, ಮಲ ವಿಸರ್ಜನೆಗೆ ಭಾರತೀಯ ಶೈಲಿಯ ಟಾಯ್ಲೆಟ್ಟನ್ನು ಉಪಯೋಗಿಸುತ್ತಾರೆ ಎನ್ನುವ ವಿವರಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳದಿದ್ದರೆ ಅದರ ಹಿಂದಿರುವ ಅಷ್ಟೂ ಸಂಶೋಧನೆ, ಟೆನ್ಸೈಲ್ ಸ್ಟ್ರೆಂಥ್, ತೂಕ, ಬಾಳಿಕೆ.... ಎಲ್ಲವೂ ವ್ಯರ್ಥವೇ. ಈ ರೀತಿಯ ಒಳನೋಟಗಳನ್ನು ಕೊಡುವುದಕ್ಕೆ ಜನರ ನಡುವಿದ್ದು ಅವರ ಜೀವನವನ್ನು ಜೀವಿಸಿದವರಿಗೆ ಮಾತ್ರ ಸಾಧ್ಯ. ಇದನ್ನು ಒಂದು ಉದಾಹರಣೆಯಾಗಿ ಅರುಣಾ ವ್ಯಾಖ್ಯಾನಿಸುತ್ತಾರೆ.

ದೇವಡುಂಗ್ರಿಯಿಂದ ಪ್ರಾರಂಭವಾದ ಮಜ್ದೂರ್ ಕಿಸಾನ್ ಶಕ್ತಿ ಸಂಘಟನ್ - ಬಡಜನರ, ಕೃಷಿಕರ, ಕೂಲಿಕೆಲಸ ಮಾಡುವವರ ಹಕ್ಕುಗಳಿಗಾಗಿ ಹೋರಾಡುತ್ತಾ ಬಂದಿರುವ ಸಂಸ್ಥೆ. ಹಕ್ಕುಗಳು ಎನ್ನುವುದನ್ನು ಪರಿಭಾಷಿಸುವುದು ಹೇಗೆ? ಘನತೆಯಿಂದ ಜೀವನ ಜೀವಿಸುವ, ಶ್ರಮವಹಿಸಿ ಸಂಪಾದಿಸುವ ಬದುಕನ್ನು ಜೀವಸಲು ಬೇಕಾದ ಅವಕಾಶಗಳೇ ಹಕ್ಕುಗಳು. ಕೌಶಲ್ಯವಿಲ್ಲದ ಕೆಲಸ ಯಾವುದೂ ಇಲ್ಲವೆಂದು ಅರುಣಾ ನಿರೂಪಿಸುತ್ತಾರೆ. ಹಳ್ಳಗಳನ್ನು ತೋಡಿ ತುಂಬುವ ಕೆಲಸ ಎಂದು ಲೇವಡಿ ಮಾಡುವ ಮನರೇಗಾದಲ್ಲೂ, ಹಳ್ಳ ತೋಡುವುದು, ಮಣ್ಣು ಎತ್ತುವುದರಲ್ಲಿನ ಕೌಶಲ್ಯ ಏನೆಂಬುದು ಅರುಣಾ ತಾವೇ ಆ ಕೆಲಸ ಮಾಡಲು ಪ್ರಯತ್ನಿಸಿದಾಗ ತಿಳಿಯುತ್ತದೆ. ಕುಹಕದಿಂದ, ಇದು ನಿನ್ನ ಕೈಲಾಗುವ ಕೆಲಸವಲ್ಲ ಎಂದು ಸಮುದಾಯದ ಮಹಿಳೆ ಹೇಳಿದಾಗ ಅಲ್ಲಿರುವ ಶ್ರಮ ಮತ್ತು ಕೌಶಲ್ಯವನ್ನು ನಾವು ಪರಿಗಣಿಸಲು ಸಾಧ್ಯವಾಗುತ್ತದೆ.

ಸರ್ಕಾರದ ಕೆಲಸದ ಮೌಲ್ಯಮಾಪನವನ್ನು ಹೇಗೆ ಮಾಡಬೇಕು? ಸರ್ಕಾರದ ಯೋಜನೆಗಳು ಒಂದು ಕೇಂದ್ರೀಕೃತ ವ್ಯವಸ್ಥೆಯಿಂದ ಬರುತ್ತವೆ. ಯೋಜನೆ ಜನರನ್ನು ತಲುಪುತ್ತಿದೆಯೇ ಎನ್ನುವುದನ್ನು ಪರಿಶೀಲಿಸಲು ಲೆಕ್ಕಪರಿಶೋಧಕರ ಕಾರ್ಯಾಲಯ ಎಲ್ಲ ದಸ್ತಾವೇಜುಗಳನ್ನು ಗಮನಿಸುತ್ತವೆ. ಆದರೆ, ನಿಜಕ್ಕೂ ಜನರಿಗೆ ಸೇರಬೇಕಾದ ಸೇವೆ ಸವಲತ್ತುಗಳು ಸೇರುತ್ತಿವೆಯೇ ಎನ್ನುವ ಪ್ರಶ್ನೆ, ಮತ್ತೆ ಅದಕ್ಕೆ ಕಂಡುಕೊಳ್ಳುವ ಉತ್ತರದಲ್ಲಿ ಯೋಜನೆ ಎಷ್ಟು ಸಫಲವಾಗಿ ಕೆಲಸ ಮಾಡುತ್ತಿದೆ ಎನ್ನುವುದು ತಿಳಿಯುತ್ತದೆ. ಇದಕ್ಕಾಗಿ ಸರ್ಕಾರದ ದಸ್ತಾವೇಜುಗಳನ್ನು ಲೆಕ್ಕಪರಿಶೋಧಕರು ಹೇಗೆ ಪರೀಕ್ಷಿಸುತ್ತಾರೋ, ಹಾಗೇ ಜನರಿಗೂ ಈ ಮಾಹಿತಿಯ ಹಕ್ಕಿರಬೇಕು. ಈ ಮಾಹಿತಿಯನ್ನು ಉಪಯೋಗಿಸಿ, ಗ್ರಾಮಸಭೆಯಲ್ಲಿ ಸರ್ಕಾರ ದಾಖಲೆಗಳಿಗೂ, ನಿಜಕ್ಕೂ ನಡೆದಿರುವ ಕೆಲಸಕ್ಕೂ ತಾಳೆ ಹಾಕಬಹುದು. ಒಂದು ರೀತಿಯಲ್ಲಿ ತಾಂತ್ರಿಕ ಲೆಕ್ಕಪರಿಶೋಧನೆಯನ್ನು ಮಹಾಲೆಕ್ಕ ಪರಿಶೋಧಕರ ಕಾರ್ಯಾಲಯ ಮಾಡಿದರೆ ಅದರ ಸಾಮಾಜಿಕ ಜವಾಬ್ದಾರಿಯನ್ನು ಜನಸುನವಾಯ (ಬಹಿರಂಗವಾಗಿ ಜನರ ದನಿಗಳನ್ನು ಕೇಳುವುದು) ಹಾಗೂ ಸೋಶಿಯಲ್ ಆಡಿಟ್ ಮುಖಾಂತರ ಮಾಡಬಹುದೆಂದು ಅರುಣಾ ಮತ್ತು ಅವರ ಸಹಚರರು ನಿರೂಪಿಸಿ ತೋರಿಸಿದರು. ಇಂದಿನ ಮಾಹಿತಿ ಹಕ್ಕು ಕಾಯಿದೆಗೂ ಉದ್ಯೋಗ ಖಾತರಿ ಕಾಯಿದೆಗೂ ಮೂಲ ಆಲೋಚನಾ ಧಾರೆ ದೇವಡುಂಗ್ರಿಯಿಂದ ಹರಿದು ಬಂದು, ರಾಷ್ಟ್ರೀಯ ಸಲಹಾ ಮಂಡಳಿಯ ಮೂಲಕ ಹಾದು ಶಾಸನಸಭೆಗೆ ಹೋಯಿತು.

ಸರ್ಕಾರದಲ್ಲಿ ಐಎಎಸ್ ಅಧಿಕಾರಿಯಾಗಿದ್ದು, ಆ ಅಧಿಕಾರವನ್ನು ಉಪಯೋಗಿಸಿ ಜನರ ಸೇವೆ ಮಾಡುವುದಕ್ಕೆ ಬದಲು, ಹೀಗೆ ಬಡತನವನ್ನು ಅನುಭವಿಸುತ್ತಾ ಆಂದೋಲನಜೀವಿಯಾಗಿ ಮುಂದುವರೆಯಬೇಕೇ ಎನ್ನುವ ಪ್ರಶ್ನೆಯನ್ನುದ್ದೇಶಿಸಿ ಅರುಣಾ ತಮ್ಮ ವಿಚಾರಗಳನ್ನು ಮಂಡಿಸುತ್ತಾರೆ. ಐಎಎಸ್ ಅಧಿಕಾರಿಗೆ ಅದಮ್ಯ ಶಕ್ತಿ ಅಧಿಕಾರಗಳಿವೆ ಎನ್ನುವುದು ಮಿಥ್ಯೆ. ಸರ್ಕಾರಿ ಯಂತ್ರಾಂಗ ಅನೇಕ ಜನರ ಒಂದು ವ್ಯವಸ್ಥೆಯಾಗಿ ನಡೆಯುತ್ತದೆ. ಅಲ್ಲಿ ಅನೇಕ ಬಾರಿ ನಮ್ಮ ಆತ್ಮಸಾಕ್ಷಿಯನ್ನು ಬಲಿಕೊಟ್ಟು ವ್ಯವಸ್ಥೆಯಲ್ಲಿ ಅಡ್ಜಸ್ಟ್ ಆಗಬೇಕು. ವಿರೋಧವನ್ನು ವ್ಯಕ್ತಪಡಿಸಬಹುದು, ತರ್ಕವನ್ನು ಒಡ್ಡಬಹುದು, ಆದರೆ ಕಡೆಗೂ ಕಾಯಿದೆ ಮತ್ತು ಅದನ್ನು ಪರಿಭಾಷಿಸುವ ಮೇಲಧಿಕಾರಿಯ ಮೂಲಕವೇ ಕೆಲಸ ಆಗುತ್ತದೆ. ಅಲ್ಲಿ ರಾಜಿಯ ಸಂದರ್ಭಗಳು ಅನೇಕ. ಆದರೆ ಆಂದೋಲನದ ದಾರಿ ಹಿಡಿದರೆ ಆತ್ಮಸಾಕ್ಷಿಯ ಪ್ರಶ್ನೆಗೆ ಬೇರೆಯೇ ಉತ್ತರ ಸಿಗುತ್ತದೆ ಎಂದು ಅರುಣಾ ಹೇಳುತ್ತಾರೆ. ಅರುಣಾರ ಮಾತಿಗೆ ವಿರುದ್ಧವಾಗಿ ಐಎಎಸ್ ಅಧಿಕಾರಿಯಾಗಿದ್ದು, ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿ ನಿವೃತ್ತಿ ಪಡೆದ ವೈ.ವಿ. ರೆಡ್ಡಿಯವರ ದೃಷ್ಟಿಕೋನ ಭಿನ್ನವಾಗಿದೆ.